IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಜೇಡರ ದಾಸಿಮಯ್ಯನ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ

**Latha L C**

**Assistant Professor**

**Department of Kannada**

**Government First Grade College Thirthahalli**

ಕ್ರಿ ಶ 12 ನೆಯ ಶತಮಾನದ ವಚನ ಚಳವಳಿಯು ಕನ್ನಡ ನಾಡಿನಲ್ಲಿ ನಡೆದ ಸಾಮಾಜಿಕ ಧಾರ್ಮಿಕ ಆರ್ಥಕ ರಾಜಕೀಯ ತಾರತಮ್ಯದ ವಿರುದ್ಧ ನಡೆದ ಒಂದು ದೊಡ್ಡ ಆಂದೋಲನ ಮಾತ್ರವಲ್ಲ ವಿಶ್ವ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲೆ ಮಹತ್ವದ ಕಾಲಘಟ್ಟ.. ಈ ಕಾಲಘಟ್ಟದಲ್ಲಿ ಕಲ್ಯಾಣವೆಂಬ ಪಟ್ಟಣದಲ್ಲಿ ಸಾಹಿತ್ಯ ಮತ್ತು ಚಳವಳಿ ಎರಡು ದಂಡೆಯ ನಡುವಿನ ನದಿಯಂತೆ ಒಟ್ಟಿಗೆ ಪ್ರವಹಿಸಿದವು. ಶ್ರೇಣೀಕರಣ ವ್ಯವಸ್ಥೆಯು ಉತ್ಪಾದಿಸಿದ ಜಾತಿ ತಾರತಮ್ಯ, ಲಿಂಗ ತಾರತಮ್ಯ ಕಂದಾಚಾರ ಮೌಢ್ಯಗಳ ಉರಿಯನ್ನೆ ಹೆಗಲ ಮೇಲೆ ಹೊತ್ತುಕೊಂಡಿದ್ದ ಅಂದಿನ ಸಮಾಜಕ್ಕೆ ಜಾತ್ಯಾತೀತ ಮನೋಭಾವವನ್ನು ಭಕ್ತಿಯ ಜೊತೆ ವೈಚಾರಿಕತೆಯನ್ನು ಸ್ಥಾವರವನ್ನು ನಿರಾಕರಿಸಿದ ಜಂಗಮ ತತ್ವವನ್ನು ಉಣಬಡಿಸಿದ್ದು ವಚನ ಚಳವಳಿ. ವಚನವೆಂಬ ವಿಶಿಷ್ಟ ಪ್ರಕಾರದ ಮೂಲಕ ಸಾಮಾಜಿಕ ಧಾರ್ಮಿಕ ರಾಜಕೀಯ ಆಯಾಮಗಳನ್ನು ಪಡೆದುಕೊಂಡು ಒಂದು ಕಾಲಘಟ್ಟದಲ್ಲಿ ಅದ್ಭುತವನ್ನೆ ಈ ಚಳವಳಿ ಸಾಧಿಸಿತು. ಪದ್ಯವೂ ಅಲ್ಲದ ಗದ್ಯವೂ ಅಲ್ಲದ ಆತ್ಮೀಯ ಸಂವಹನಕ್ಕೆ ಮಾಧ್ಯಮವಾದ ವಚನಗಳು ಸಮಾಜದ ಧ್ವನಿಯಾಗಿ ವಚನ ಚಳವಳಿಗೆ ಕಾರಣವಾಯಿತು. ಆ ಜಾತಿ ಈ ಜಾತಿ ಮೇಲು ಕೀಳು ತಾರತಮ್ಯದಿಂದ ತಲ್ಲಣಿಸುತಿದ್ದ ಜನ ಸಮುದಾಯದ ನಡುವೆ ಸಮಾನತೆ ಮಾನವೀಯ ಮಿಡಿತಗಳಿಗೆ ಸ್ಪಂದಿಸಿ ಕಾಯಕವನ್ನು ಗೌರವಿಸುವ ಒಂದು ಸುಂದರ ಸಮಾಜದ ಕನಸು ವಿಕಾಸವಾಯಿತು. ಅದಕ್ಕೆ ಭಕ್ತಿಯೆ ತಳಹದಿಯಾಯಿತು. ಭಕ್ತಿ ಸೂತ್ರದಲ್ಲಿ ಎಲ್ಲರನ್ನೂ ಒಂದುಗೂಡಿಸುವ ಈ ವಚನ ಚಳವಳಿಯ ಹುಟ್ಟಿಗೆ ಕಾರಣರಾದವರು ಭಕ್ತಿ ಭಂಡಾರಿ ಬಸವಣ್ಣ. ದೇಹವೆ ದೇಗುಲ ಶಿರ ಹೊನ್ನ ಕಳಸವಯ್ಯ ಎಂದ ಬಸವಣ್ಣ ಕಟ್ಟಿಕೊಟ್ಟಿದ್ದು ಜಂಗಮ ತತ್ವವನ್ನು. ನೂರಾರು ಶರಣರು ಬಸವಣ್ಣನೆಂಬ ಹಣತೆಗೆ ಎಣ್ಣೆ ಬತ್ತಿಯಾಗಿ ಮಹಾ ಬೆಳಕಾದರು. ಬಸವಾದಿ ಶರಣರು ಯಾವ ವಚನಗಳ ಮೂಲಕ ಸಮ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರೋ ಅದಕ್ಕೆ ಭವ್ಯ ವೇದಿಕೆ ದೊರೆತದ್ದು ಬಸವ ಪೂರ್ವ ಯುಗದ ವಚನಕಾರರಿಂದ.

## ಬಸವ ಪೂರ್ವ ವಚನಕಾರರು

ಬಸವಣ್ಣನಿಗಿಂತ ಪೂರ್ವದಲ್ಲಿ ಈ ನೆಲದಲ್ಲಿ ಹೊಸ ಮನ್ವಂತರದ ಸೂಚನೆಗಳು ಕಾಣಿಸಿಕೊಂಡವು. ಬಸವಾದಿ ಶರಣರ ಕಾಲಘಟ್ಟಕ್ಕಿಂತ ಸ್ವಲ್ಪ ಹಿಂದೆ ಕೆಲವು ಶರಣರು ವಚನಗಳ ಮೂಲಕ ಹೊಸ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ಭೂಮಿಕೆಯನ್ನು ಸಿದ್ಧಗೊಳಿಸಿದರು. ಧರ್ಮವನ್ನು ಸಾಧನವಾಗಿಸಿಕೊಂಡು ಜನ ಸಾಮಾನ್ಯರನ್ನು ಮೇಲೆತ್ತುವ ಪ್ರಯತ್ನಗಳು ನಡೆದವು.ಇಂತಹ ಬೆಳವಣಿಗೆಗೆ ಕಾರಣರಾದವರು ಮಾದಾರ ಚೆನ್ನಯ್ಯ ಡೋಹರ ಕಕ್ಕಯ್ಯ ಜೇಡರ ದಾಸಿಮಯ್ಯ. ಈ ವಚನಕಾರರನ್ನು ಬಸವಣ್ಣನು ತನ್ನ ವಚನಗಳಲ್ಲಿ ಮನತುಂಬಿ ನೆನೆದಿದ್ದಾನೆ. ಹೀಗೆ ನೆನೆಯಲ್ಪಟ್ಟ ಆದ್ಯರಲ್ಲಿ ಜೇಡರ ದಾಸಿಮಯ್ಯನು ಒಬ್ಬ. ಬಸವಣ್ಣನು ಜೇಡರ ದಾಸಿಮಯ್ಯನನ್ನು ಸುಮಾರು ಹದಿನೆಂಟು ವಚನಗಳಲ್ಲಿ ನೆನೆದಿದ್ದಾನೆ. ಮತ್ತೆ ಮತೆ ಜೇಟರ ದಾಸಿಮಯ್ಯನನ್ನು ನೆನೆದಿರುವುದು ದಾಸಿಮಯ್ಯನ ಮೇಲಿನ ಗೌರವ ಮತ್ತು ಭಕ್ತಿಯನ್ನು ಸೂಚಿಸುತ್ತದೆ.

## ದಾಸಿಮಯ್ಯನ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ

12 ಯ ಶತಮನದ ವಚನ ಕ್ರಾಂತಿಗೆ ಮುನ್ನಡಿ ಬರೆದು ಆದ್ಯ ವಚನಕಾರ ಎನಿಸಿಕೊಂಡವನು ಜೇಡರ ದಾಸಿಮಯ್ಯ. ಬಸವ ಯುಗದ ಪೂರ್ವದಲ್ಲಿಯೆ ವಚನ ರಚಿಸಿದ ದೇವರ ದಾಸಿಮಯ್ಯ ಒಬ್ಬ ಅದ್ಭುತ ವಚನಕಾರ. ಕನ್ನಡ ಸಾಹಿತ್ಯಕ್ಕೆ ತನ್ನ ವಚನಗಳ ಮೂಲಕ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಜೇಡರ ದಾಸಿಮಯ್ಯನ ಕಾಲ ಹನ್ನೊಂದನೆಯ ಶತಮಾನದ ಕೊನೆಯ ಭಾಗ.ಈತನ ಜನ್ಮ ಸ್ಥಳ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೋಕಿನ ಮುದೆನೂರು ಗ್ರಾಮ. ನೇಕಾರ ದಂಪತಿಗಳಾದ ಕಾಮಯ್ಯ ಮತ್ತು ಮತ್ತು ಶಂಕರಿಯ ಮಗನಾಗಿ ಹುಟ್ಟದ ಜೇಡರ ದಾಸಿಮಯ್ಯನು ತನ್ನ ಕುಲ ಕಸುಬಾದ ನೆಯ್ಗೆಯ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಂಡವನು. ನೇಯುವ ವೃತ್ತಿಯವನಾದ್ದರಿಂದ ಜೇಡರ ಎಂಬ ಹೆಸರು ಬಂದಿರಬಹುದು. ಈತನ ಹೆಂಡತಿ ದುಗ್ಗಳೆ. ತಾನು ಮಾಡುವ ವೃತ್ತಿಯನ್ನು ಗೌರವಿಸುತ್ತ ಬಡತನದಲ್ಲು ತೃಪ್ತ ಜೀವನ ಬದುಕಿದವನು. ವಚನವೆಂಬ ಪ್ರಕಾರಕ್ಕೆ ಮೊದಲಿಗರಾಗಿ ರಾಮನಾಥ ಎಂಬ ಅಂಕಿತನಾಮದಿಂದ ಸುಮಾರು ನೂರೈವತ್ತು ವಚನಗಳನ್ನು ರಚಿಸಿ ವಚನ ಪ್ರಕಾರಕ್ಕೆ ನಾಂದಿ ಹಾಡಿ ಆದ್ಯವಚನಕಾರರಾದರು. ಬಡತನ ಸಾಂಸರಿಕ ತೃಪ್ತ ಜೀವನಕ್ಕೆ ಅಡ್ಡಿಯಾಗಲಿಲ್ಲ. ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ವಚನದ ಮೂಲಕ ದಾಂಪತ್ಯ ಜೀವನದ ಮಹತ್ವವನ್ನು ಸ್ತ್ರೀ ಸಮಾನತೆಯನ್ನು ಸ್ತ್ರೀಯರನ್ನು ಗೌರವಿಸುವುದನ್ನು ತಿಳಿಸಿದ ಮೊದಲ ವಚನಕಾರ ದಾಸಿಮಯ್ಯ. ತನ್ನ ಕಾಯಕ ಮತ್ತು ದರ್ಶನದ ಅನುಭವದ ಸಾರವನ್ನು ಬಳಸಿಕೊಂಡು ವಚನಗಳನ್ನು ರಚಿಸಿದ ಶ್ರೇಷ್ಟ ವಚನಕಾರ. ವಸ್ತ್ರಗಳನ್ನು ತಯಾರಿಸುವ ಕಾಯಕದೊಂದಿಗೆ ಗುರು ಲಿಂಗ ಜಂಗಮಗಳ ಆರಾಧನೆಯನ್ನು ಕೈಗೊಂಡವನು. ತಾನಿದ್ದ ಪರಿಸರದಲ್ಲಿಯೆ ಸಮಾಜದ ಓರೆಕೋರೆಗಳನ್ನು ಮನಗಂಡು ತನ್ನ ವಚನಗಳ ಮೂಲಕ ಅವುಗಳನ್ನು ಒರೆಗೆ ಹಚ್ಚಿ ಸಮ ಸಮಾಜದ ಪರಿಕಲ್ಪನೆಯನ್ನು ತಿಳಿಸಿಕೊಟ್ಟವರು ದಾಸಿಮಯ್ಯ. ವಚನ ಸಾಹಿತ್ಯದ ಮುಂದಿನ ಸಮೃದ್ಧಿಯ ಮುನ್ಸೂಚನೆಯನ್ನು ದಾಸಿಮಯ್ಯನ ವಚನಗಳಲ್ಲಿ ಕಾಣಬಹುದು. ದಾಸಿಮಯ್ಯನವರ ವಚನಗಳು ಲಿಂಗ ಸಮಾನತೆ, ಡಾಂಭಿಕ ಭಕ್ತಿಯ ವಿಡಂಭನೆ, ಹಸಿವಿನ ತೀವ್ರ ಸಂಕಟ, ಸೃಷ್ಟಿಯ ಚೈತನ್ಯ ಶಕ್ತಿ, ಕಾಯಕ ನಿಷ್ಠೆ, ಅನುಭಾವ ಅನುಭವ, ಭಕ್ತಿ ತತ್ವಗಳ ಸಾರ ಸಂದೇಶದಿಂದ ಕೂಡಿವೆ. ಕಾವ್ಯ ಸೌಂದರ್ಯ ಹೊಸತನ ಜೀವಂತಿಕೆಯ ದೃಷ್ಟಿಯಿಂದ ದಾಸಿಮಯ್ಯನ ವಚನಗಳು ಎತ್ತರಕ್ಕೆ ನಿಲ್ಲುತ್ತವೆ. ದಾಸಿಮಯ್ಯನವರ ಕೆಲವು ವಚನಗಳ ಮೂಲಕ ದಾಸಿಮಯ್ಯನವರ ಚಿಂತನೆಗಳನ್ನು ಆ ಮೂಲಕ ದಾಸಿಮಯ್ಯ ಸಮಾಜಕ್ಕೆ ನೀಡಿರುವ ಒಳಿತಿನ ಸಂದೇಶವನ್ನು ಅರ್ಥೈಸಿಕೊಳ್ಳಬಹುದು. ಶಿವ ತತ್ವ ನಿಷ್ಠೆಯನ್ನು ಮತ್ತು ಡಾಂಬಿಕ ಭಕ್ತಿಯನ್ನು ಕುರಿತು ದಾಸಿಮಯ್ಯ ತನ್ನ ವಚನಗಳಲ್ಲಿ ಹಿಗೆ ಹೇಳಿದ್ದಾನೆ.

ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮದಾನ
ನಿಮ್ಮ ದಾನವನುಂಡು ಅನ್ಯರನು ಹೊಗಳುವ
ಕುನ್ನಿಗಳೇನೆಂಬೆ ರಾಮನಾಥ

ಈ ವಚನದಲ್ಲಿ ದಾಸಿಮಯ್ಯನವರು ಮನುಷ್ಯ ಬದಕಲು ಬೇಕಾಗಿರುವ ಭೂಮಿ ನೀರು ಗಾಳಿ ಇವೆಲ್ಲವು ಶಿವಕೊಟ್ಟದಾನ ಈ ದಾನವನುಂಡು ಶಿವನನ್ನು ನೆನೆಯದೆ ಅನ್ಯರನ್ನು ಹೊಗಳುವ ಮನುಷ್ಯನ ಸ್ವಾರ್ಥವನ್ನು ಈ ವಚನ ಮಾರ್ಮಿಕವಾಗಿ ತಿಳಿಸಿದ್ದಾರೆ.

ಶಿವತತ್ವದ ನಿಷ್ಟೆಯನ್ನು ಈ ವಚನ ತಿಳಿಸುತ್ತದೆ.

ಬರು ಸಠಗನ ಭಕ್ತಿ ದಿಟವೆಂದು ನೆಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ರಾಮನಾಥ

ಕಪಟಿ ಮೋಸಗಾರನ ಭಕ್ತಿಯನ್ನು ನಂಬಬೇಡ ಬೆಕ್ಕು ಮಠದೊಳಗೆ ಇದ್ದರು ಇಲಿಯ ಕಂಡು ಅದನ್ನು ಹಿಡಿಯಲು ನೆಗೆಯುವಂತೆ, ಮೋಸ ಡಾಂಭಿಕತನ ಉಳ್ಳವನ ಭಕ್ತಿಯನ್ನು ನಿಜವೆಂದು ನಂಬಲಾಗದು. ಸಾಮಾನ್ಯವಾಗಿ ಮಠದಲ್ಲಿರುವ ಗುರುಗಳು ಸರ್ವ ಸಂಗ ಪರಿತ್ಯಾಗಿಗಳು ಒಳ್ಳೆಯ ನಡೆನುಡಿಗಳನ್ನು ಹೊಂದಿರುತ್ತಾರೆ ಮತ್ತು ಮಠದ ಪರಿಸರದಲ್ಲಿರುವ ಸಕಲ ಜೀವಿಗಳು ಒಳ್ಳೆಯವೆ ಆಗಿರುತ್ತವೆ ಎಂಬುದು ಜನರ ನಂಬಿಕೆಯಾಗಿರುತ್ತದೆ. ಈ ನಂಬಿಕೆಯನ್ನು ವೇಷಧಾರಿಗಳು ಹುಸಿ ಭಕ್ತಿ ಎಂಬ ನಟನೆಯ ಮೂಲಕ ಜನರನ್ನು ನಂಬಿಸುತ್ತಾರೆ ಅಂತವರ ಭಕ್ತಿಯನ್ನು ನಿಜವೆಂದು ನಂಬದಿರು ಎಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ. ಜೇಡರ ದಾಸಿಮಯ್ಯನವರ ವಚನಗಳು ಸಮಾಜದ ಇಂತಹ ಅನೇಕ ದೋಷಗಳನ್ನು ಎತ್ತಿ ಹಿಡಿಯುತ್ತವೆ.

ಸತ್ಯದ ನುಡಿ ತೀರ್ಥ

ಮುಕ್ತಿಯ ಪ್ರಸಂಗ ತೀರ್ಥ

ಹರಿವ ನದಿ ಎತ್ತಣ ತೀರ್ಥ ರಾಮನಾಥ

ಹರಿವ ನದಿಯ ನೀರು ನೀರೆ ಹೊರತು ತಿರ್ಥವಲ್ಲ. ಸತ್ಯದ ನಡೆ ನುಡಿಗಳು ತೀರ್ಥ ಎಂಬ ದಾಸಿಮಯ್ಯನವರ ಈ ವಚನ ಸಮಾಜಕ್ಕೆ ಒಳಿತನ್ನು ಉಂಟು ಮಾಡುವ ನಡೆ ನುಡಿಗಳೆ ಪವಿತ್ರವಾದದ್ದು ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತವೆ.

ಅಚ್ಚ ಶಿವೈಕ್ಯಗೆ ಹೊತ್ತಾರೆ ಅಮವಾಸೆ

ಮಟಮಟ ಮಧ್ಯಾಹ್ನವೆ ಸಂಕ್ರಾಂತಿ

ಮತ್ತೆ ಅಸ್ತಮಾನ ಪೌರ್ಣಿಮೆ ಹುಣ್ಣಿಮೆ

ಭಕ್ತನ ಮನೆಯ ಅಂಗಳವೆ

ವಾರಾಣಾಸಿ ಕಾಣ ರಾಮನಾಥ.

ಧರ್ಮ ಗಳ ಭಾಗವಾಗಿ ಧರ್ಮಗಳೆ ಸೃಷ್ಟಿಸಿದ ಪುಣ್ಯ ಕ್ಷೇತ್ರಗಳು ನೂರಾರಿವೆ. ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡುವುದೆ ಪರಮ ಗುರಿ ಎಂದು ಭಕ್ತರು ನಂಬಿರುತ್ತಾರೆ. ನಂಬಿಸುವ ಪುರೋಹಿತರು ಶಾಸ್ತ್ರಕಾರರು ಇರುತ್ತಾರೆ. ಇದಕ್ಕೆ ಭಕ್ತರು ತಲೆಕೊಡುತ್ತಾರೆ. ತಿಳಿದು ನೋಡಿದರೆ ನಿಜ ಭಕ್ತಿಯಿರುವವನಿಗೆ ಪುಣ್ಯ ಕ್ಷೇತ್ರಗಳ ಅಗತ್ಯವಿಲ್ಲ. ಕೆಟ್ಟದ್ದನು ಮಾಡಿ ಪಾಪ ತುಂಬಿಕೊಂಡಿರುವವರು ಅದರ ನಾಶಕ್ಕಾಗಿ ಪುಣ್ಯ ಕ್ಷೇತ್ರಗಳಿಗೆ ಹೋಗುತ್ತಾರೆ.ಇದು ಇಂದಿಗು ನಡೆಯುತ್ತಿರುವುದೆ. ಆದರೆ ದಾಸಿಮಯ್ಯನಂತವರಿಗೆ ಸದ್ ಭಕ್ತನ ಮನೆಯ ಅಂಗಳವೆ ವಾರಾಣಾಸಿಯಾಗಿರುತ್ತದೆ. ಎಲ್ಲ ಕಾಲವು ಸದ್ ಕಾಲವೆ ಆಗಿರುತ್ತದೆ. ದಾಸಿಮಯ್ಯನವರ ವಚನಗಳು ಡಾಂಭಿಕ ಭಕ್ತಿಯನ್ನು ವಿಡಂಬಿಸಿ ಒಮ್ಮನದ ಭಕ್ತಿಯನ್ನು ಪ್ರತಿಪಾದಿಸುತ್ತವೆ

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ

ಇರುಳೆಲ್ಲಾ ನಡೆದನಾ ಸುಂಕಕಂಜಿ

ಕಳವೆಯೆಲ್ಲಾ ಹೋಗಿ ಬರಿ ಗೋಣಿ ಉಳಿಯಿತ್ತು

ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ.

ಎಂಬ ಈ ವಚನವು ಮನದಲ್ಲಿ ಕೆಟ್ಟ ಆಲೋಚನೆಯನ್ನು ಉಳ್ಳವನು ತೋರಿಕೆಗೆ ದೇವರಲ್ಲಿ ಒಲವುಳ್ಳಂತೆ ನಟಿಸಿದರೆ ಅದು ಹರಿದ ಗೋಣಿಯಲ್ಲಿ ಭತ್ತ ತುಂಬಿದಂತೆ ವ್ಯರ್ಥ. ಕೊನೆಗೆ ಆತ ಭತ್ತವನ್ನು ಕಳೆದುಕೊಳ್ಳಬೇಕಾಗುತ್ತದೆ. ಡಾಂಭಿಕತನದ ಮತ್ತು ವಂಚಕನ ಭಕ್ತಿಗೆ ಈ ವಚನ ಉತ್ತಮ ರೂಪಕವಾಗಿದೆ, ಹೀಗೆ ದಾಸಿಮಯ್ಯನ ಅನೇಕ ವಚನಗಳು ಭಕ್ತಿಯನ್ನು ಒರೆಗಚ್ಚಿ ನೋಡುತ್ತವೆ. ಹರ ತನ್ನ ತಿರಿವಂತೆ ಮಾಡುವ ಒರೆದು ನೋಡುವ ಸುವರ್ಣದ ಚಿನ್ನದಂತೆ ಅರೆದು ನೋಡುವ ಗಂಧದಂತೆ ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದು ಎತ್ತಿಕೊಂಬ ನಮ್ಮ ರಾಮನಾಥ. ಈ ವಚನ ಭಕ್ತಿಯ ರೂಪಕವನ್ನು ಭಕ್ತನ ನಿಷ್ಠೆಯನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದೆ. ಸಮಾಜದ ಅನೇಕ ಸಂಗತಿಗಳಿಗೆ ವಚನಗಳ ಮೂಲಕವೆ ಮುಖಾಮುಖಿಯಾಗುವ ದಾಸಿಮಯ್ಯನು ಬಡವರ ಹಸಿವಿನ ಬೇಗೆಯನ್ನು ಅನುಭವಿಸಿ ಅರ್ಥೈಸಿಕೊಂಡವನು. ಮೇಲು ಕೀಳು ಬಡವ ಬಲ್ಲಿದ ನೆಂಬ ಈ ಶ್ರೇಣಿಕರಣದ ವ್ಯವಸ್ಥೆಯೊಳಗೆ ಉನ್ನತ ಜಾತಿ ಮತ್ತು ಶ್ರೀಮಂತರಿಗೆ ಹಸಿವಿನ ಸಂಕಟದ ಅರಿವಿಲ್ಲ. ಆದರೆ ನೇಕಾರ ವೃತ್ತಿಯವನಾದ ದಾಸಿಮಯ್ಯ ಹಸಿವಿನ ತೀವ್ರತೆಯನ್ನು ಕಂಡವನು. ಹೀಗಾಗಿ ಹಸಿವಿನ ಸಂಕಟ ತಿಳಿಯದ ದೇವರಿಗು ಸವಾಲು ಹಾಕುತ್ತಾನೆ.

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ

ವಿಷ ವೇರಿತ್ತಯ್ಯಾ ಆಪಾದ ಮಸ್ತಕಕ್ಕೆ

ಹಸಿವಿಗನ್ನನಿಕ್ಕಿ ವಿಷವನಿಳುಹ ಬಲ್ಲಡೆ

ವಸುಧೆಯೊಳಗಾತನೆ ಗಾರುಡಿಗ ರಾಮನಾಥ.

ಹಸಿವೆಂಬ ವಿಷದ ಹೆಬ್ಬಾವಿಗೆ ಅನ್ನವನಿಟ್ಟು ವಿಷ ತಣಿಸುವವನೆ ನಿಜವಾದ ದೇವರು. ಕೋಟ್ಯಂತರ ಜನರ ಹಸಿವಿನ ಬೇಗುದಿಯನ್ನು ತಣಿಸುವ ಕೆಲಸವು ಜಗತ್ತಿನಲ್ಲಿ ಅತಿ ಸವಾಲಿನದು ಎಂಬುದನ್ನು ಮಾರ್ಮಿಕವಾಗಿ ವಚನ ತಿಳಿಸುತ್ತದೆ. ವಚನಕಾರರು ಭಕ್ತಿಯನ್ನೆ ಪ್ರಧಾನವಾಗಿಸಿಕೊಂಡು ವಚನಗಳನ್ನು ರಚಿಸಲಿಲ್ಲ ಅವರ ವಚನಗಳು ಸಾಮಾಜಿಕ ಧಾರ್ಮಿಕ ಅಸಮಾನತೆ ಮತ್ತು ವೈಚಾರಿಕತೆಯ ದೊಡ್ಡ ದನಿಯಾಗಿ ಒಡಮೂಡಿದವು.

ಹೀಗಾಗಿಯೆ ದಾಸಿಮಯ್ಯನ ವಚನಗಳಲ್ಲಿ ಸಾಮಾಜಿಕ ಅಸಮಾನತೆಯನ್ನು ಕಂದಾಚರಗಳನ್ನು ನಿಷ್ಠುರವಾಗಿ ನಿರಾಕರಿಸುವುದು ಕಂಡು ಬರುತ್ತದೆ. ಬಡವರನ್ನು ತಳ ಸಮುದಾಯದವರನ್ನು ಕಾಡುವ ಹಸಿವಿನಿಂದ ಅನುಭವಿಸುವ ಬೆಗುದಿಯನ್ನು ದಾಸಿಮಯ್ಯ ನಿಷ್ಠುರವಾಗಿ ಪ್ರಶ್ನಿಸಿದ್ದಾನೆ. ಹಸಿವು ದಾಸಿಮಯ್ಯನನ್ನು ಬಹುವಾಗಿ ಕಾಡಿದೆ. ಹಸಿವಿನ ಸಂಕಟವನ್ನು ಅನುಭವಿಸುವ ಬಡವರ ದನಿಯಾಗಿ ದಾಸಿಮಯ್ಯ ಹಸಿವಿನ ಸಂಕಟವನ್ನು ವಚನಗಳಲ್ಲಿ ಕಂಡರಿಸಿದ್ದಾನೆ .

ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ

ಒಡಲುಗೊಂಡವನೆಂದು ನೀನೆನ್ನ ಜಡೆದೊಮ್ಮೆ ನುಡಿಯದಿರ

ನಿ ನನ್ನಂತೆ  ಒಡಲುಗೊಂಡು ನೋಡ ರಾಮನಾಥ

ಎಂದು ದೇವರಿಗೆ ಸವಾಲು ಹಾಕುವ ದಾಸಿಮಯ್ಯನು ಹಸಿವು ಮತ್ತು ಹುಸಿ ಎರಡನ್ನು ಮಾನವರು ಮೀರಲಾಗದ ಸ್ಥಿತಿಯನ್ನು ನಿರೂಪಿಸುತ್ತಾನೆ ಒಡಲಿರುವ ಮನುಷ್ಯನಿಗೆ ಹಸಿವು ಸಹಜ ಹಸಿವು ನೀಗಿಸಿ ಕೊಳ್ಳಲು ಹುಸಿಯು ಸಹಜ. ಹಸಿವಿನ ಸಂಕಟವನ್ನು ನೀಗಿಸಿಕೊಳ್ಳಲು ಹೇಳುವ ಸುಳ್ಳು ಸ್ವಾರ್ಥಕ್ಕಾಗಿ ಅಲ್ಲ. ಸಂಕಟದ ಬೇನೆಯನ್ನು ನೀಗಿಸಿಕೊಳ್ಳಲು ಅನಿವಾರ್ಯವಾಗಿ ಕಂಡುಕೊಂಡದಾರಿ. ಈ ಹಸಿವಿನ ಯಾತನೆ ಅರ್ಥವಾಗಬೇಕೆಂದರೆ ನೀನು ನನ್ನಂತೆ ಹಸಿವಿನ ಬಸಿರ ಹೊತ್ತ ಓಡಲನ್ನು ಹೊಂದಿ ನೋಡು ಆಗ ನಿನಗೆ ಬಡವರ ಹಸಿವಿನ ಸಂಕಟದ ಬೆಲೆ ತಿಳಿಯುತ್ತದೆ ಎಂದು ದೇವರಿಗೆ ಸವಾಲು ಹಾಕುತ್ತಾನೆ.  ಇನ್ನೊಂದು ವಚನದಲ್ಲಿ ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದರೆ ವಿಷವೇರಿತ್ತಯ್ಯಾ ಆಪಾದ ಮಸ್ತಕಕ್ಕೆ ಹಸಿವಿಗೆ ಅನ್ನವನಿಕ್ಕಿ ವಿಷವನಿಳಿಸುವಾತನೆ ವಸುಧೆಯೊಳು ಗಾರುಡಿಗ ರಾಮನಾಥ ಎಂಬ ಈ ವಚನವು ಅಲ್ಲಮಪ್ರಭುವಿನ ಅನ್ನ ದೇವರಿಗಿಂತ ಇನ್ನು ದೇವರು ಉಂಟೆ ಎಂಬ ವಚನವನ್ನು ನೆನಪಿಸುತ್ತದೆ.  ಅನ್ನಕೊಡುವವನನ್ನೆ ದೇವನಾಗಿಸುವ  ಮೂಲಕ ಮನುಷ್ಯನು ದೈವತ್ವಕ್ಕೇರುವ ಬಗೆಯನ್ನು ಅರ್ಥಮಾಡಿಸುತ್ತದೆ.

ದಾಸಿಮಯ್ಯ ಕನ್ನಡದ ಮೊದಲ ವಚನಕಾರ ಮಾತ್ರವಲ್ಲ ಲಿಂಗ ಸಮಾನತೆಯನ್ನು ವಚನಗಳಲ್ಲಿ ಪ್ರತಿಪಾದಿಸಿದ ಮೊದಲಿಗ. ಗಂಡು  ಹೆಣ್ಣಿನ ಸಮಾನತೆ ಮತ್ತು ಲಿಂಗ ತಾರತಮ್ಯದ ವಿರುದ್ಧ ಸಾವಿರ ವರ್ಷದ ಹಿಂದೆಯೆ ವಚನಗಳಲ್ಲಿ ಉಲ್ಲೇಖಿಸಿದ್ದು ದಾಸಿಮಯ್ಯನವರ ವೈಚಾರಿಕತೆ ಪ್ರಬುದ್ದತೆಗೆ ಸಾಕ್ಷಿಯಾಗಿದೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು

ಗಡ್ಡ ಮೀಸೆ ಬಂದರೆ ಗಂಡೆಂಬರು

ನಡುವೆ ಸುಳಿವ ಆತ್ಮ

ಗಂಡು ಅಲ್ಲ ಹೆಣ್ಣು ಅಲ್ಲ ರಾಮನಾಥ

ಈ ವಚನವು ಲಿಂಗ ಅಸಮಾನತೆಯನ್ನು ಪ್ರಶ್ನಿಸಿ ಆತ್ಮಕ್ಕೆ ಸ್ತ್ರೀ ಪುರುಷವೆಂಬ ಭೇದವಿಲ್ಲ ಎಂಬ ಸತ್ಯವನ್ನು ಪ್ರತಿಪಾದಿಸುತ್ತದೆ. ದೇಹದ ಹೊರನೋಟದಲ್ಲಿ ಭೇದವಿದೆಯೆ ಹೊರತು ಒಳಗಿರುವ ಆತ್ಮ ಒಂದೆ ಎಂದು ತಿಳಿಸಿ ಹೆಣ್ಣಿಗೆ ಒಂದು ಮಹತ್ವದ ಸ್ಥಾನವನ್ನು ಕೊಟ್ಟ ವಚನಕಾರ

ಜೇಡರ ದಾಸಿಮಯ್ಯ. ಸ್ತನಗಳಿದ್ದರೆ ಹೆಣ್ಣು ಗಡ್ಡ ಮೀಸೆಯಿದ್ದರೆ ಗಂಡು ಎಂದು ದೈಹಿಕವಾಗಿ ಭೇದವನ್ನು ನಿರ್ಧರಿಸುವುದು ಜಗತ್ತಿನ ರೂಢಿ ದೇಹದಲ್ಲಿ ವ್ಯತ್ಯಾಸವಿದೆಯೆ ಹೊರತು ಆತ್ಮದಲ್ಲಿ ವ್ಯತ್ಯಾಸವಿಲ್ಲ. ದೇಹದ ಒಳಗಿರುವ ಆತ್ಮ ನಿರಾಕಾರ ಅದು ಹೆಣ್ಣು ಅಲ್ಲ ಗಂಡು ಅಲ್ಲ ಆತ್ಮ ಲಿಂಗಾತೀತವೆಂಬ ಅದ್ಭುತ ವಿವೇಚನೆಯನ್ನು ತೆರೆದಿಟ್ಟವರು ಜೇಡರ ದಾಸಿಮಯ್ಯ. ಧರ್ಮ ಶಾಸ್ತ್ರಗಳು ಹೆಣ್ಣಿಗೆ ನೀಡದ ಸ್ಥಾನವನ್ನು ವಚನಕಾರರು ದಕ್ಕಿಸಿಕೊಡಲು ಪ್ರಯತ್ನಿಸಿದರು. ಶರಣರು ಸಕಲ ಜೀವಗಳಿಗು ಲೇಸನ್ನು ಬಯಸಿದವರು. ಜೇಡರ ದಾಸಿಮಯ್ಯ ತನ್ನ ವಚನಗಳಲ್ಲಿ ತನ್ನ ಮಡದಿಯನ್ನು ಮನದುಂಬಿ ನೆನೆದಿದ್ದಾನೆ ದಾಂಪತ್ಯ ಜೀವನದಲ್ಲಿ ಪತ್ನಿಯ ತ್ಯಾಗ ಸಹಕಾರವನ್ನು ಗೌರವಿಸಿದ ದಾಸಿಮಯ್ಯನವರು ಸತಿಪತಿಗೊಳೊಂದಾದ ಭಕ್ತಿ  ಮಾತ್ರ ಶಿವನಿಗೆ ಹಿತವಪ್ಪುದು ಎಂಬುದನ್ನು ಮನಗಂಡಿದ್ದರು. ಬಂದುದನರಿದು ಬಳಸುವಳು,ಬಂದುದ ಪರಿಣಾಮಿಸುವಳು ಬಂದು ಬಳಗವ ಮೆರೆಸುವಳು ದುಗ್ಗಳೆಯ ತಂದು ಬದುಕಿದೆನಾ ಕಾಣಾ ರಾಮನಾಥ ಈ ವಚನದಲ್ಲಿದಾಸಿಮಯ್ಯನವರು ತನ್ನ ಸತಿಯನ್ನು  ಪ್ರಶಂಶಿಸಿರುವುದು ಕಂಡುಬರುತ್ತದೆ. ಮಡದಿ ದುಗ್ಗಳೆಯು ವಚನಗಳನ್ನು ರಚಿಸದ್ದು ಆಕೆಗೆ ದೊರೆತ ಮಾನ್ಯತೆಯನ್ನು ವಚನಕಾರರ ವೈಚಾರಿಕ ದೃಷಿಕೋನವನ್ನು ತಿಳಿಯಬಹುದು. ವಚನಕಾರರು ತಮ್ಮ ವಚನಗಳನ್ನು ಕೇವಲ ಭಕ್ತಿಗಾಗಿ ರಚಿಸಿದ್ದಲ್ಲ. ಸಾಮಾಜಿಕ ಅಸಮಾನತೆ ಕಂದಾಚಾರ ಮೂಢನಂಬಿಕೆ ಅನಿಷ್ಟ ಪದ್ಧತಿ ಲಿಂಗ ತಾರತಮ್ಯದ ವಿರುದ್ಧ ಸಮರವನ್ನೆ ಸಾರಿದವರು. ಯಾವುದೆ ಪ್ರತಿರೋಧ ಎದುರಾದರು ಹಿಂದಡಿಯಿಡದೆ ನಿರ್ಭೀತಿಯಿಂದ ವಚನಗಳನ್ನು ರಚಿಸಿ ವಚನ ಚಳವಳಿಯ ಮೂಲಕ ಸಾಮಾಜಿಕ ಕ್ರಾಂತಿಯನ್ನೆ ಉಂಟುಮಾಡಿದರು. ಅಂತಹ ವಚನಕಾರರಲ್ಲಿ ದಾಸಿಮಯ್ಯನವರು ಒಬ್ಬರು. ಅವರ  ವಚನಗಳು  ಇಂದಿನ ಆಧುನಿಕ ಯುಗದಲ್ಲು ತನ್ನ ಶ್ರೇಷ್ಟತೆಯನ್ನು ಕಾಯ್ದುಕೊಂಡು ಬಂದಿವೆ. ಜನರ ಬದುಕಿಗೆ ದಾರಿದೀಪವಾಗಿವೆ.

ಪರಾಮರ್ಶನ ಗ್ರಂಥಗಳು

ಜೇಡರ ದಾಸಿಮಯ್ಯ :  ಅಮರೇಶ ನುಡಗೋಣಿ

ವಚನ ಬೆಳಕು : ರಂಜಾರ್ನ ದರ್ಗಾ

ವಚನ ಸಾಹಿತ್ಯ : ಎಂ .ಚಿದಾನಂದ ಮೂರ್ತಿ

ಜೇಡರ ದಾಸಿಮಯ್ಯನ ನೂರಾರು ವಚನಗಳು : ರುದ್ರ ಮೂರ್ತಿಶಾಸ್ತ್ರೀ